


ಹಿಂಸೆಯ ಚಿತ್ರಣ 'ಎನ್‌ಕ್ಲೇವ್' ಸಿನಿಮಾದ ದೃಶ್ಯ

ಗಂಟೆಯೊಳಕ್ಕೆ ಸಿಕ್ಕಿ ಹಾಕಿಕೊಂಡ ನೆನಾದ್ ಗಂಟೆ ಮತ್ತು ನೆಲದ ನಡುವಿನ ಸಣ್ಣ ಸಂದಿಯಿಂದ ಬರುವ ಗಾಳಿಯಷ್ಟನ್ನೇ ಸೇವಿಸಿ ಬದುಕುಳಿಯಲು ಹೆಣಗುತ್ತಿದ್ದಾನೆ. ತಂದೆಯೋ ನೆನಾದ್ ಹುಡುಕಾಟದಲ್ಲಿದ್ದಾನೆ. ಸಹಾಯಕ್ಕಾಗಿ ನೆನಾದ್ ಕೂಗು ಅರಣ್ಯರೋದನದಂತೆ. ಕಡೆಗೆ ಬಶ್ಕಿಂ ಕುಂಟುತ್ತಲೇ ನೆನಾದ್‌ನನ್ನು ರಕ್ಷಿಸಲು ಮುಂದಾಗಿ ಆತನ ತಂದೆಯ ಸುರಕ್ಷಿತ ಕೈಗಳಿಗೆ ಸೇರುವಂತೆ ಮಾಡುತ್ತಾನೆ. ಅರೆ ಪ್ರಜ್ಞಾವಸ್ಥೆಯಲ್ಲಿರುವ ನೆನಾದ್ ತನ್ನ ಸುತ್ತಲ ಪರಿಸರ, ಗೆಳೆಯರ ಒಡನಾಟದ ನೆನಪುಗಳನ್ನೇ ಕನವರಿಸುತ್ತಾನೆ. ತನ್ನಜ್ಜನಿಗೆ ಸೂಕ್ತವಾದ ಸಾಮುದಾಯಿಕ ಅಂತ್ಯಸಂಸ್ಕಾರ ನಡೆಯುವುದಕ್ಕೆ ಪೂರಕ ವಾತಾವರಣ ರೂಪಿಸುವ ಅವನ ಇಂಥದೊಂದು ಯತ್ನವನ್ನು ಹಾಗೂ ನೆನಾದ್ ಮತ್ತು ಬಶ್ಕಿಂ ನಡುವಿನ ಆಟ ಹಿಂಸೆಗೆ ತಿರುಗುವ ಮೂಲಕ ಯುದ್ಧೋನ್ಮಾದ ನಿಜ ಬದುಕಿನೊಳ್ಳಕ್ಕೆ ಅಡಿ ಇಟ್ಟ ಪರಿಯನ್ನು, ಅದರ ಭೀಕರತೆಯನ್ನು ನಿರ್ದೇಶಕ ತುಂಬ ತಣ್ಣಗೆ ತೆರೆಯ ಮೇಲೆ ಚಿತ್ರಿಸುತ್ತಾರೆ. ಈ ಸಹಜತೆಯೊಳಗೇ ಸಣ್ಣ ನಾಟಕೀಯ ಅಂಶವೂ ಇದೆ. ಅದು ಹಿಂಸೆಯನ್ನು ಕ್ರಮೇಣ ಸುಡುವ ಶಕ್ತಿ ಪಡಕೊಂಡು ಇಡೀ ಚಿತ್ರಣವನ್ನೇ ಮನೋಜ್ಞವಾಗಿಸಿದೆ.

ಕೊಸೊವೊದಲ್ಲಿ ನಡೆದ ವಿಕಟ ಸ್ವರೂಪ ಮತ್ತು ಅಂಥ ಹಿಂಸಾ ಆಯೋಜನೆಗಳ ಬಗ್ಗೆ ನಿರ್ದೇಶಕ ರಾಡೊವನೊವಿಕ್(Radovanovic) ಅವರಿಗೆ ಸ್ಪಷ್ಟತೆ ಇದೆ. ರಕ್ತಪಾತದ ಹಿಂಸೆಯ ಘಟನೆಗಳನ್ನು ಪುನರ್‌ಸೃಷ್ಟಿಸುವ ಸಾಹಸಕ್ಕೆಳಿಯದೆ ಅದನ್ನು ಹಿನ್ನೆಲೆಯಾಗಷ್ಟೇ ಇಟ್ಟುಕೊಂಡು ಮಕ್ಕಳ ಮನಸುಗಳ ಮೂಲಕ ಅದರ ಪರಿಣಾಮಗಳನ್ನು ಕಟ್ಟಿಕೊಡಲು ನೋಡಿದ್ದಾರೆ. ನೆನಾದ್ ಕಂಗಳ ಮೂಲಕ ಹಿಂಸೆಯ ಸೋಲಿನ ದರ್ಶನ ಮಾಡಿಸುತ್ತಾರೆ. ಇಡೀ ಚಿತ್ರದ ಓಘ ಮತ್ತು ತಣ್ಣಗಿನ ಕ್ರೌರ್ಯಕ್ಕೆ ಕ್ಯಾಮೆರಾದ (ಆ್ಯಕ್ಸೆಲ್ ಷೆಪಟ್ Axel Schneppat) ಅತ್ಯಂತ ನವಿರು ಚಲನೆ(ಪ್ಯಾನ್), ಫ್ರೇಮ್ ಪೂರಕ. ಎಲ್ಲೂ ವಿಭಿನ್ನ ಫ್ರೇಮಿಂಗ್, ಬೆಚ್ಚಿ ಬೀಳಿಸುವ ದೃಶ್ಯ ವೈಭವ ಕಟ್ಟಿಕೊಡಲು ಕಂಪ್ಯೂಟರ್ ಗ್ರಾಫಿಕ್ಸ್ ಆಗಲಿ ಅಥವಾ ಭಿನ್ನ ತಂತ್ರಜ್ಞಾನವನ್ನಾಗಲಿ ಬಳಸಿಕೊಳ್ಳದೇ ಸಹಿಷ್ಣುತಾ ಭಾವನೆಯನ್ನು ದಟ್ಟವಾಗಿಸುವಂಥ ಸಹಜ ಟ್ರೀಟಮೆಂಟ್ ಸಿನಿಮಾದ ಭಾವಸಾಂದ್ರತೆಯನ್ನು ಹೆಚ್ಚಿಸಿದೆ. ಸಂಗೀತದ (ಎಲೆನಿ ಕರ್ಯೆಂದ್ರೊ ಮತ್ತು ಐರೆನಾ ಪೊಪೊವಿ) ಪಾತ್ರ ಕೂಡ ಅಷ್ಟೇ.

ಚಿತ್ರದ ಕೊನೆಯಲ್ಲಿ ಸ್ಕೂಲ್ ಮಕ್ಕಳ ಆಟ ನೋಡುತ್ತ ನೆನಾದ್ ಅನ್ಯಮನಸ್ಕನಾಗಿದ್ದಾನೆ. ಗೆಳೆತನಕ್ಕೆ ಒಳಗಿನಿಂದಲೇ ಹಂಬಲಿಸುತ್ತಿದ್ದಾನೆ. ಆತನಿಗೆ ದೋಸ್ತ್ ಬಶ್ಕಿಂನದೇ ನೆನಪು... ಇದು ಚಿತ್ರ ಜಗಕ್ಕೆ ತೋರಿಸ ಬಯಸುವ ಮಹತ್ವದ ಮಾನವೀಯ ತುಡಿತ, ಅಂತಃಕರಣವಾಗಿದೆ.